ಈ) ಈ ರಸ್ತೆಗೆ ನಬಾರ್ಡ್ ಯೋಜನೆಯಲ್ಲಿ ಹಣ ಮಂಜೂರಾಗಿ ಈ ಕೆಲಸ ನಿಲ್ಲಿಸಿರುವುದರ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಈ ರಸ್ತೆ ಕಾಮಗಾರಿಗೆ ದಿನಾಂಕ 31-07-2001 ರಲ್ಲಿ ಆರ್‌ಐಡಿಎಫ್-7ರ ಯೋಜನೆಯಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆ) ಈ ಕಾಮಗಾರಿಯನ್ನು ಮೆ. ಬಾಲಾಜಿ ಕನ್‌ಷ್ಟ್ರಕ್ಷನ್ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ.

ಇ) ಬಂದಿದೆ.

ಈ0 ಗುತ್ತಿಗೆ ನಿಯಮಾವಳಿಯ ಪ್ರಕಾರ ಈಗಾಗಲೇ ರೂ.27,000 ದಂಡ ವಿಧಿಸಲಾಗಿದೆ. ಈ ಕಾಮಗಾರಿಯನ್ನು ಮಾರ್ಚ್ 2004ರ ಒಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಚಿಂತಾಮಣಿ ತಾಲ್ಲೂಕಿನಲ್ಲಿ ಹೆದ್ದಾರಿ ರಸ್ತೆ ಅವ್ಯವಸ್ಥೆ

3289 (3752) : ಶ್ರೀ ಚೌಡಾರೆಡ್ಡಿ (ಚಿಂತಾಮಣಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿಯಿಂದ ಮುರಗಮಲ್ಲ, ಯಗವಕೋಟೆ, ಬಟ್ಟಹಳ್ಳಿಗೆ ಹೋಗುವ ಲೋಕೋಪಯೋಗಿ ಹೆದ್ದಾರಿಯು ವಾಹನಗಳ ಸಂಚಾರ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಹೆದ್ದಾರಿಯ ಅನೇಕ ಭಾಗಗಳಲ್ಲಿ ರಸ್ತೆಯು ಬಹಳವಾಗಿ ಶಿಥಿಲಗೊಂಡು ಸಾರ್ವಜನಿಕರ ಮತ್ತು ವಾಹನಗಳ ಸಂಚಾರಕ್ಕೆ ಅಡಚಣೆಯುಂಟಾಗುತ್ತಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಹೆದ್ದಾರಿಯಲ್ಲಿನ ಶಿಥಿಲಗೊಂಡ ಭಾಗಗಳನ್ನು ಡಾಂಬರೀಕರಣ ಮಾಡಲು ಸರ್ಕಾರ ಶೀಘ್ರವೇ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಬಂದಿರುತ್ತದೆ.

ಆ) ಬಂದಿರುತ್ತದೆ.

ಇ) ವಾರ್ಷಿಕ ನಿರ್ವಹಣೆ ಯೋಜನೆಯಡಿಯಲ್ಲಿ ಗುಂಡಿಗಳನ್ನು ಮುಚ್ಚಿ ರಸ್ತೆ ಸಂಚಾರಕ್ಕೆ ಅನುಕೂಲ ಮಾಡುವ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಅನುದಾನ ಲಭ್ಯತೆಯನುಗುಣವಾಗಿ ರಸ್ತೆ ಅಭಿವೃದ್ಧಿ ಕೆಲಸ ಮಾಡುವ ಕ್ರಮವನ್ನು ಕೈಗೊಳ್ಳಲಾಗುವುದು.

ಮುಜರಾಯಿ ಸಂಸ್ಥೆಯ ಆದಾಯದ ಬಗ್ಗೆ

3290 (3798) : ಶ್ರೀ ವಿ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಲ್ಲೂರು ನಂಜನಗೂಡು ಚಾಮುಂಡಿಬೆಟ್ಟ ಮತ್ತು ಬನಶಂಕರಿ ದೇವಾಲಯಗಳ ವಾರ್ಷಿಕ ಆದಾಯವೆಷ್ಟು? ಮಾಡಲಾಗುತ್ತಿರುವ ವೆಚ್ಚವೆಷ್ಟು?

ಆ) ಬೆಂಗಳೂರು ಧರ್ಮರಾಯ ಸ್ವಾಮಿ ದೇವಾಲಯ ಅಣ್ಣಮ್ಮ ದೇವಾಲಯ